ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1366
ಸದಸ್ಯರ ಹೆಸರು	:	ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	:	18.03.2020
ಉತ್ತರಿಸುವ ಸಚಿವರು	:	ಕಂದಾಯ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
(ಅ)	2018 ಮತ್ತು 2019 ರಲ್ಲಿ ಕೊಡಗು ಜಿಲ್ಲೆಯಲ್ಲಿ ಸಂಭವಿಸಿದ ಪ್ರಕೃತಿ ವಿಕೋಪದ ಹಿನ್ನೆಲೆಯಲ್ಲಿ ಹಿಂದೆ ಇದ್ದ ಭೂ ಪರಿವರ್ತನೆ ನಿಯಮಗಳನ್ನು ತಿದ್ದುಪಡಿ/ ಬದಲಾವಣೆ ಮಾಡಲಾಗಿದೆಯೇ;	ಇಲ್ಲ.
(ಆ)	ಮಾಡಿದ್ದಲ್ಲಿ, ಬದಲಾವಣೆ ಮಾಡಲಾದ ನಂತರದ ಭೂ ಪರಿವರ್ತನೆ ನಿಯಮಗಳ ಆದೇಶದ ಪ್ರತಿ ಒದಗಿಸುವುದು;	ಅನ್ವಯಿಸುವುದಿಲ್ಲ
(ಇ)	ಬದಲಾದ ಭೂ ಪರಿವರ್ತನೆ ನಿಯಮಗಳ ನಂತರ ಭೂ ಪರಿವರ್ತನೆಯನ್ನು ಎಷ್ಟು ವಿಸ್ತೀರ್ಣ ವ್ಯಾಪ್ತಿಗೆ ಮಿತಿಗೊಳಿಸಲಾಗಿದೆ (ಸಂಪೂರ್ಣ ವಿವರ ನೀಡುವುದು)	2018 ಮತ್ತು 2019 ರಲ್ಲಿ ಕೊಡಗು ಜಿಲ್ಲೆಯಲ್ಲಿ ಸಂಭವಿಸಿದ ಪ್ರಕೃತಿ ವಿಕೋಪದ ಹಿನ್ನೆಲೆಯಲ್ಲಿ ಭಾರತೀಯ ಭೂ ವೈಜ್ಞಾನಿಕ ಸರ್ವೇಕ್ಷಣಾ ಇಲಾಖೆಯ ವರದಿಯಂತೆ ಕೊಡಗು ಜಿಲ್ಲೆಯಲ್ಲಿ ಕೃಷಿ ಜಮೀನುಗಳನ್ನು ಕೃಷಿಯೇತರ ಉದ್ದೇಶಗಳಿಗೆ ಭೂಪರಿವರ್ತನೆ ಮಾಡುವುದನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದ್ದು (ಪ್ರತಿ ಲಗತ್ತಿಸಿದೆ), ವಾಸ್ತವ್ಯದ ಉದ್ದೇಶಕ್ಕಾಗಿ ಮನೆ ನಿರ್ಮಾಣಕ್ಕಾಗಿ 15 ರಿಂದ 20 ಸೆಂಟ್ ವರೆಗಿನ ಜಮೀನನ್ನು ಮಾತ್ರ ಕೆಲವೊಂದು ಷರತ್ತಿನೊಂದಿಗೆ ಭೂ ಪರಿವರ್ತಿಸಲು ಅನುಮತಿಸಿದೆ (ಪ್ರತಿ ಲಗತ್ತಿಸಿದೆ).

(ಕಡತ ಸಂಖ್ಯೆ:ಕಂಇ 09 ಎಲ್‌ಜಿಒ 2020)

(ಆರ್.ಅಶೋಕ)
ಕಂದಾಯ ಸಚಿವರು.

ಸಂಖ್ಯೆ:ಆರ್‌ಡಿ 24 ಎಲ್‌ಜಿಎ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:23.11.2018

ಇವರಿಂದ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಕಂದಾಯ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

ಇವರಿಗೆ
ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ,
ಮಡಿಕೇರಿ

ಮಾನ್ಯರೇ,

ವಿಷಯ: ಕೊಡಗು ಜಿಲ್ಲೆಯಲ್ಲಿ ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ನಿರ್ದೇಶನ ಕೋರಿರುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಭೂಪರಿ/ಮ/27/2018-19 ದಿನಾಂಕ:09.10.2018.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದೆಡೆಗೆ ಗಮನ ಸೆಳೆಯಲಾಗಿದೆ. ಭಾರತೀಯ ಭೂ ವೈಜ್ಞಾನಿಕ ಸರ್ವೇಕ್ಷಣಾ ಇಲಾಖೆಯ ವರದಿಯಲ್ಲಿ ಈ ಕೆಳಕಂಡಂತೆ ತಿಳಿಸಿದೆ:-

"Although there are numerous reasons for landslides to occur, the main reason for vast devastation in recent landslides in Kodagu are rainfall and the slope modification by human interference. There are not guidelines or landuse regulations to monitor the landuse in the area. The State Govrnment along with State disaster management authority should frame strict guidelines/regulations for the land use in hilly terrains of Western Ghat in general and Kodagu district in particular. The landslide prone areas and buffer zones may be identified separately highlighting what kind of activities can be allowed in these zones and stringent regulations/policies may be formed for landuse managament for sustainable development"

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ಮಾರ್ಗಸೂಚಿಗಳನ್ನು ಹೊರಡಿಸುವವರೆಗೆ ಕೊಡಗು ಜಿಲ್ಲೆಯಲ್ಲಿ ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕೆ ಭೂ ಪರಿವರ್ತಿಸುವುದನ್ನು ಸ್ಥಗಿತಗೊಳಿಸುವಂತೆ ಸರ್ಕಾರದ ಹಂತದಲ್ಲಿ ತೀರ್ಮಾನವಾಗಿರುವುದನ್ನು ತಮಗೆ ತಿಳಿಸಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ

Vimalamma C

(ವಿಮಲಮ್ಮ.ಸಿ) 23/11/18

ಪೀಠಾಧಿಕಾರಿ,

ಕಂದಾಯ ಇಲಾಖೆ (ಭೂ ಮಂಜೂರಾತಿ-2)

ಸಂಖ್ಯೆ:ಆರ್‌ಡಿ 24 ಎಲ್‌ಜಿಓ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:08.05.2019

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಕಂದಾಯ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

ಇವರಿಗೆ:
ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ,
ಮಡಿಕೇರಿ.

ಮಾನ್ಯರೇ,

ವಿಷಯ: ಕೊಡಗು ಜಿಲ್ಲೆಯಲ್ಲಿ ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ನಿರ್ದೇಶನ ಕೋರಿರುವ ಬಗ್ಗೆ.

ಉಲ್ಲೇಖ: (1) ತಮ್ಮ ಪತ್ರ ಸಂಖ್ಯೆ: ಭೂಪರಿ/ಮ/27/2018-19 ದಿನಾಂಕ:11.02.2019.
(2) ಸರ್ಕಾರದ ಪತ್ರ ಸಂಖ್ಯೆ:ಆರ್‌ಡಿ 24 ಎಲ್‌ಜಿಓ 2018, ದಿನಾಂಕ:23.11.2018.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ (1)ರ ಪತ್ರದೆಡೆಗೆ ಗಮನ ಸೆಳೆಯಲಾಗಿದೆ. ವಾಸ್ತವ್ಯದ ಉದ್ದೇಶಕ್ಕಾಗಿ ಮನೆ ನಿರ್ಮಿಸುವವರಿಗೆ 15 ರಿಂದ 20 ಸೆಂಟ್ ವಿಸ್ತೀರ್ಣದ ಜಮೀನಿನ ಭೂ ಪರಿವರ್ತನೆಗೆ ತಹಶೀಲ್ದಾರ್, ಉಪವಿಭಾಗಾಧಿಕಾರಿ ಇವರ ಸ್ಥಳ ಪರಿಶೀಲನೆ ವರದಿಯನ್ನು ಆಧರಿಸಿ ಜಿಲ್ಲಾಧಿಕಾರಿಯವರು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 95 ರಡಿ ಕಲ್ಪಿಸಲಾದ ಅಧಿಕಾರದಂತೆ ಭೂ ಪರಿವರ್ತನೆಗೆ ಆದೇಶ ನೀಡಲು ಈ ಕೆಳಕಂಡ ಅಂಶಗಳ ಪರಿಶೀಲನೆಗೊಳಪಟ್ಟು ಸರ್ಕಾರವು ಅನುಮತಿ ನೀಡಿದೆ ಎಂದು ತಮಗೆ ತಿಳಿಸಲು ನಿರ್ದೇಶಿತಳಾಗಿದ್ದೇನೆ;

(1) ಭಾರತೀಯ ಭೂ ವೈಜ್ಞಾನಿಕ ಸರ್ವೇಕ್ಷಣಾ ಇಲಾಖೆ ರವರು ನೀಡಿರುವ ವರದಿಯಲ್ಲಿನ ಅಂಶದಂತೆ ಕಟ್ಟಡಗಳ ರಚನೆ ಸಂಬಂಧ non-stable area ಇದ್ದಲ್ಲಿ ಭೂ ಪರಿವರ್ತನೆಗೆ ಅವಕಾಶ ನೀಡಬಾರದು.

(2) ನದಿ, ಹಳ್ಳಗಳಿಂದ ಕನಿಷ್ಠ 10 ಮೀಟರ್ ದೂರದಲ್ಲಿರಬೇಕು.

..............................2

(3) ತೀವ್ರತರವಾದ ಇಳಿಜಾರು ಇರುವ ಮತ್ತು ಕಣಿವೆಯಂತಹ ಪ್ರದೇಶಗಳಲ್ಲಿ ಮನೆ ನಿರ್ಮಾಣ ಮಾಡುವುದು ಅಪಾಯಕಾರಿಯಾಗಿರುವ ಹಿನ್ನೆಲೆಯಲ್ಲಿ ಭೂ ಪರಿವರ್ತನೆಗೆ ಅವಕಾಶ ನೀಡಬಾರದು.

(4) 2018ರ ಮಳೆಗಾಲದಲ್ಲಿ ಭೂ ಕುಸಿತ ಉಂಟಾದ ಜಮೀನಿನಲ್ಲಿ ಮನೆ ನಿರ್ಮಾಣ ಮಾಡುವುದು ಸೂಕ್ತವಲ್ಲದ ಕಾರಣ ಅಂತಹ ಜಮೀನುಗಳಲ್ಲಿ ಭೂ ಪರಿವರ್ತನೆಗೆ ಅವಕಾಶ ನೀಡಬಾರದು.

ತಮ್ಮ ನಂಬುಗೆಯ

Vimalamma

(ವಿಮಲಮ್ಮ.ಸಿ) 8/5/19

ಶಾಖಾಧಿಕಾರಿ.

ಕಂದಾಯ ಇಲಾಖೆ (ಭೂ ಮಂಜೂರಾತಿ-2).